# ಗುರುದೇವರ ಶ್ರೀಪಾದಗಳಿಗೆ ಮಣಿದ ಮನ

**ಕೆ. ಎಲ್. ರಮಾ ದಿವಾಕರ್**

ಇದೊಂದು ತುಂಬ ಹೃದಯಂಗಮವಾದ ಪ್ರಸಂಗ. ಶ್ರೀರಾಮಕೃಷ್ಣರ ವ್ಯಕ್ತಿತ್ವದ ಒಂದು ವಿಶಿಷ್ಟತೆಯನ್ನು ಎತ್ತಿ ತೋರಿಸಿರುವ ಶ್ರೀಮತಿ ರಮಾ ದಿವಾಕರ್ ಅವರು ಮೈಸೂರು ರಾಮಕೃಷ್ಣ ಆಶ್ರಮದ ನಿಕಟ ಭಕ್ತರು ಹಾಗೂ ಅಧ್ಯಾಪಕ ವೃತ್ತಿಯಲ್ಲಿರುವರು.

**ಹಿಂದಿ ಸಾಹಿತ್ಯದಲ್ಲಿ** ವಿಶಿಷ್ಟಸ್ಥಾನ ಪಡೆದಿರುವ ಶ್ರೇಷ್ಠಕವಿ ಶ್ರೀ ಮೈಥಿಲೀಶರಣಗುಪ್ತರ "ಯಶೋಧರಾ" ಕಾವ್ಯವನ್ನು ಓದುತ್ತಲಿದ್ದೆ. ದುಃಖವೇನೆಂದರಿಯದೆ ಸರ್ವ-ಸುಖಗಳ ತೊಟ್ಟಿಲಲ್ಲಿ ಬೆಳೆದ ಸಿದ್ಧಾರ್ಥ ಜನತೆಯ ದುಃಖವನ್ನು ಕಂಡು ಮಾನಸಿಕವಾಗಿ ತೊಳಲಿದ, ಬಳಲಿದ. ಜನತೆಯ ದುಃಖವನ್ನು ದೂರಮಾಡುವ ಸಿದ್ಧಿಯನ್ನು ಪಡೆಯುವ ಮಹಾನ್ ಉದ್ದೇಶದ ಸಲುವಾಗಿ ಅರ್ಧರಾತ್ರಿ ತನ್ನವರಾರಿಗೂ ಹೇಳದೇ ಸರ್ವಸುಖವನ್ನೂ ವಾತ್ಸಲ್ಯಮಯರಾದ ತಂದೆ-ತಾಯಿಯರನ್ನೂ ಸುಂದರಿಯಾದ ಪತ್ನಿಯನ್ನೂ ಮೋಹಕ ಮಗುವನ್ನೂ ತೊರೆದು ಕವಿವಾಣಿಯಂತೆ "ಜಗವೆಲ್ಲ ಮಲಗಿರಲು ಇವನೊಬ್ಬನೆದ್ದ"—ಹೊರಟ. ವಿಷಯ ತಿಳಿದ ಸಿದ್ಧಾರ್ಥನ ಪತ್ನಿ ಯಶೋಧರಾ ತನ್ನ ಮನದಾಳದ ದುಃಖವನ್ನು ಪ್ರಿಯ ಸಖಿಯಲ್ಲಿ ತೋಡಿಕೊಳ್ಳುವ ಭಾಗವದು. ಕವಿ ಹೆಣ್ಣಿನ ಹೃದಯವನ್ನು ಹೊಕ್ಕು ಬರೆದಿರುವರೇನೋ ಎನಿಸುವಂತೆ ಅವಳ ಆಂತರ್ಯದ ನೋವನ್ನು ಬಿಚ್ಚಿ ತೋರಿಸುತ್ತಾರೆ. ಯಶೋಧರೆ ಸಖಿಯೊಂದಿಗೆ ಹೇಳುತ್ತಾಳೆ: सखी, वे मुझसे कहकर जाते—"ಸಖಿ, ಅವರು ನನ್ನೊಂದಿಗೆ ಹೇಳಿ ಹೋಗಿದ್ದರೆ—ಅವರು ಸಂಸಾರವನ್ನು ತ್ಯಜಿಸಿ ಹೋದರೆಂಬುದಲ್ಲ, ಅವರು ನನ್ನನ್ನು 'ತಮ್ಮ ಸಾಧನೆಯ ಹಾದಿಗೆ ಅಡ್ಡಿ—ಪಥ್ ಬಾಧಾ' ಎಂದು ತಿಳಿದದ್ದು ನನಗೆ ದುಃಖ ಉಂಟುಮಾಡಿದೆ.


ಬುದ್ಧ ಮತ್ತು ಯಶೋಧರಾ

ನಾನು ಕ್ಷತ್ರಿಯ ಕುಲದ ನಾರಿ. ನನ್ನ ಧರ್ಮ ಯುದ್ಧಕ್ಕೆ ಹೊರಟ ಪತಿಯನ್ನು ಕ್ಷಣ ಮಾತ್ರದಲ್ಲಿ ಸಿದ್ಧಪಡಿಸಿ, ಆರತಿ ಎತ್ತಿ, ವಿಜೇತರಾಗಲು ಹಾರೈಸಿ ಕಳುಹಿಸುವುದು. ಅಂತಹ ನಾನು ಅವರ ಈ ಮಹಾನ್ ಕಾರ್ಯಕ್ಕೆ ಅಡ್ಡಿ ಬರುತ್ತಿದ್ದನೇ? ನನಗೆ ಅದು ಹೆಮ್ಮೆಯ ವಿಷಯವಾಗಿರಲಿಲ್ಲವೇ? ಜಗತ್ತಿನ ದುಃಖವನ್ನು ದೂರಮಾಡಲು ಹೊರಟ ಪತಿಯನ್ನು ಬೀಳ್ಕೊಡುವ ಆ ಮಹಾಭಾಗ್ಯ ನನ್ನದಾಗಿತ್ತು. ಅಂತಹ ಮಹಾಭಾಗ್ಯದಿಂದಲೂ ನನ್ನನ್ನು ವಂಚಿತಳನ್ನಾಗಿಸಿದ ಅವರ ಬಗೆಗೆ, ನನ್ನನ್ನು ತಿರಸ್ಕರಿಸಿ ಹೊರಟ ಅವರ ಬಗೆಗೆ ನಾನು ಹೇಗೆ ಹೆಮ್ಮೆ ಪಡಲಿ" ಎಂದು ವಿಲಪಿಸುವ ಯಶೋಧರೆಯ ದುಃಖವನ್ನೂ ನೋವನ್ನೂ ಓದುತ್ತಾ ಓದುತ್ತಾ ಥಟ್ಟನೆ ನನ್ನ ಮನಸ್ಸಿನಲ್ಲಿ ಮೂಡಿದುದು ಮತ್ತೊಂದು ಮಹಾನ್ ಮೂರ್ತಿ—ಶ್ರೀರಾಮಕೃಷ್ಣ ಪರಮಹಂಸರದು.

ಸಾಧನೆಯ ಹಾದಿಯಲ್ಲಿ ಮುನ್ನಡೆಯುತ್ತಿದ್ದ "ಹುಚ್ಚ" ಎಂಬ ಪಟ್ಟವನ್ನು ಪಡೆದುಕೊಂಡ ತನ್ನ ಪತಿಯನ್ನು ನೋಡಲು ಷೋಡಶಿ ಶಾರದಾ ನಡೆದುಬಂದರು. ಚಿಂತೆಯ, ಆತಂಕದ ಮಹಾಸಾಗರವನ್ನು ಎದೆಯಲ್ಲಿ ಹೊತ್ತು ಬಂದರು—ಆ ಅನಕ್ಷರಸ್ಥೆ ಹುಡುಗಿ. ತನ್ನ ಪತಿಯನ್ನು ಕಂಡು ಅವರ ವರ್ತನೆಯನ್ನು ನೋಡಿ ಸಂತೋಷಗೊಂಡರು, ಸಮಾಧಾನಗೊಂಡರು.

ಅಂದು ಪರಮಹಂಸರು ಮಹಿಳೆಯರು ಹೆಮ್ಮೆ ಪಡುವಂತೆ, ಒಬ್ಬ ಆದರ್ಶಗೃಹಸ್ಥನಂತೆ ತಮ್ಮ ಪತ್ನಿಯನ್ನು ಕೇಳಿದರು—"ನನಗೆ ಎಲ್ಲಾ ಹೆಂಗಸರಲ್ಲಿಯೂ ಭಗವತಿಯೇ ಕಾಣುತ್ತಾಳೆ. ನಿನ್ನಲ್ಲಿಯೂ ನನಗೆ ಅವಳೆ ಕಾಣುತ್ತಿರುವಳು. ನಾನು ನಿನ್ನೊಂದಿಗೆ ಸಾಧಾರಣ ಪುರುಷನಂತೆ ಇರುವುದಕ್ಕೆ ಸಾಧ್ಯವಿಲ್ಲ. ಆದರೆ ನೀನು ನನ್ನನ್ನು ಮದುವೆಯಾಗಿರುವುದರಿಂದ ನಿನಗೆ ನನ್ನ ಮೇಲೆ ಅಧಿಕಾರವಿದೆ. ನೋಡು, ಸಾಧಾರಣ ಸ್ತ್ರೀಯಂತೆ ನೀನು ಸಂಸಾರದಲ್ಲಿರಬೇಕೆಂದರೆ, ನಾನು ಅದಕ್ಕೂ ಸಿದ್ಧನಿರುವೆ. ಅಥವಾ ನೀನೂ ನನ್ನಂತೆ ಎಲ್ಲರಲ್ಲಿಯೂ ಜಗನ್ಮಾತೆಯನ್ನು ನೋಡಬೇಕೆಂದರೆ ಅದಕ್ಕೂ ನಾನು ನಿನ್ನನ್ನು ಅಣಿ ಮಾಡಬಲ್ಲೆ" ಎಂದು ಪತ್ನಿಯ ಸಮ್ಮತಿಯನ್ನು ಕೇಳಿದರು. ಪತಿಯನ್ನು ಸಂಪೂರ್ಣವಾಗಿ ಅರಿತ ಆ ಮಹಾಸತಿ ಥಟ್ಟನೆ ಉತ್ತರಿಸಿದರು—"ನಾನು ನಿಮ್ಮನ್ನು ಸಂಸಾರದ ಕೆಸರಿಗೆ ಇಳಿಸುವುದಕ್ಕೆ ಯತ್ನಿಸುವುದಿಲ್ಲ. ನಿಮ್ಮ ವ್ರತವೇ ನನ್ನ ವ್ರತ. ನನ್ನನ್ನೂ ನಿಮ್ಮಂತೆ ಎಲ್ಲದರಲ್ಲಿಯೂ ಭಗವಂತನನ್ನು ಕಾಣುವಂತೆ ಮಾಡಿ."

ಯಶೋಧರೆ ಬಯಸಿದ, ಸಿದ್ಧಾರ್ಥನನ್ನು ಬುದ್ಧನನ್ನಾಗಿಸಿದ ಆ ಮಹಾನ್ ನಿರ್ಧಾರದಲ್ಲಿ ಭಾಗಿಯಾಗುವ ಆ ಮಹಾಭಾಗ್ಯದ ಅವಕಾಶವನ್ನು ರಾಮಕೃಷ್ಣ ಪರಮಹಂಸರು ಶಾರದಾದೇವಿಗೆ ನೀಡಿದರು. ಅವರನ್ನೂ ಅಧ್ಯಾತ್ಮದಲ್ಲಿ ಮುನ್ನಡೆಸಿ "ಶ್ರೀಮಾತೆ" "ಶಾರದಾಮಾತೆ" ಎಂದು ಲೋಕ ಪೂಜಿಸುವ ಎತ್ತರಕ್ಕೆ ಕೊಂಡೊಯ್ದರು. ಪೂಜ್ಯ ಸ್ವಾಮಿ ಸೋಮನಾಥಾನಂದರು ತಿಳಿಸಿರುವಂತೆ "ಶ್ರೀ ಶಾರದಾದೇವಿಯವರ ಜೀವನವನ್ನು ಭಗವತಿಯ ಪೂಜೆಗೆ ಯೋಗ್ಯವಾದ ಪುಷ್ಪವನ್ನಾಗಿ ಮಾಡತೊಡಗಿದರು." ಶ್ರೀರಾಮಕೃಷ್ಣರು ಹಲವು ಕುಸುಮಗಳನ್ನು ಭಗವತಿಯ ಪಾದಾರವಿಂದಗಳಲ್ಲಿ ಇಟ್ಟರು. ಅದರಲ್ಲೆಲ್ಲ ಶ್ರೇಷ್ಠವಾಗಿರುವುದು, ಅತ್ಯಂತ ಪರಿಮಳದಿಂದ ಕೂಡಿರುವುದು, ಅತ್ಯಂತ ಸುಂದರವಾಗಿರುವುದು ಶ್ರೀಶಾರದಾದೇವಿ ಎಂಬ ಚೈತನ್ಯಕುಸುಮ.

ಪರಮಹಂಸರು ಶ್ರೀಶಾರದಾದೇವಿಯವರನ್ನು ಎಲ್ಲ ವಿಧಗಳಲ್ಲೂ ಮುನ್ನಡೆಸಿ ತಮ್ಮ ನಂತರ ಶಿಷ್ಯರಿಗೆ ಮಾರ್ಗದರ್ಶನ ನೀಡುವ ಯೋಗ್ಯತೆಯನ್ನು ತಂದುಕೊಟ್ಟರು. ಅಂತಹ ಶ್ರೀರಾಮಕೃಷ್ಣ ಪರಮಹಂಸರಿಗೆ ವಂದಿಸದ ಹೆಣ್ಣು ಉಂಟೇ?

ಪ್ರಾಯಶಃ ಯಶೋಧರೆಯ ಅಳಲು ಎಲ್ಲ ಹೆಣ್ಣಿನ ಅಳಲಲ್ಲವೇ? ಇದನ್ನು ಅರಿತ ಪರಮಹಂಸರು ಬುದ್ಧನಿಂದಾದ ಈ ತಪ್ಪನ್ನು ಆಗಗೊಡದೆ ಸ್ತ್ರೀಕುಲಕ್ಕೆ ಗೌರವವನ್ನು ನೀಡಿದ ಈ ಘಟನೆಯನ್ನು ನೆನೆದರೆ ಮನಸ್ಸು ತುಂಬಿ ಬರುತ್ತದೆ—ಪರಮಹಂಸರ ಶ್ರೀಪಾದಗಳಿಗೆ ತನ್ನಂತೆ ತಾನು ನಮಿಸುತ್ತದೆ. ❄